**ಸಾಕ್ಷಿಗೆ ದಿನಾಂಕಃ 26.02.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಪಿ.ಎಸ್. ವಕೀಲರಿಂದಃ**

ನಮ್ಮ ತಾತನ ಹೆಸರು ಬೋಸೇ ಗೌಡ ಎಂದರೆ ಸರಿ . ನಮ್ಮ ಅಜ್ಜಿಯ ಹೆಸರು ಪುಟ್ಟಮಾದಮ್ಮ ಎಂದರೆ ಸರಿ . ಬೋಸೇಗೌಡ ಬದುಕಿದ್ದಾಗ ಟಿ.ನರಸೀಪುರದಲ್ಲಿ ಮಿಲ್ಟ್ರಿ ಹೊಟೆಲ್ ನ್ನು ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಬೋಸೇಗೌಡ ತೀರಿಕೊಂಡ ಮೇಲೆ ಅವರ ಹೆಂಡತಿ ಪುಟ್ಟಮಾದಮ್ಮನವರು ಸದರಿ ಹೊಟೆಲ್ ನ್ನು ಮುಂದುವರಿಸಿದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ತೀರಿಕೊಳ್ಳುವಾಗ ಅವರಿಗೆ 52 ವರ್ಷ ವಯಸ್ಸಾಗಿತ್ತು. ನಮ್ಮ ತಂದೆ ಜೀವನೋಪಾಯಕ್ಕಾಗಿ ಬೆಂಗಳೂರಿನಲ್ಲಿ ಆಟೋ ಓಡಿಸುತ್ತಿದ್ದರು. ಮೂರು ವರ್ಷಗಳಿಂದ ನಾನು ಮೈಸೂರಿನಲ್ಲಿ ವಾಸ ಇರುತ್ತೇನೆ. ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ನಮ್ಮ ತಂದೆ ವಾಸ ಇದ್ದರು. ಆ ಸಮಯದಲ್ಲಿ ನಾವು ಜನಿಸಿದ್ದೆವು. 1984 ರಲ್ಲಿ 2 ನೇ ದಾವಾ ಸ್ವತ್ತನ್ನು ನಮ್ಮ ತಂದೆ ಖರೀದಿ ಮಾಡಿರುತ್ತಾರೆ. 1984 ರಲ್ಲಿ ನಮ್ಮ ತಂದೆಯ ವಯಸ್ಸು 14 ಎಂದರೆ ಸರಿ . ನಮ್ಮ ಅಜ್ಜಿ ತಾತ ತಾವು ಮಾಡುತ್ತಿದ್ದ ಹೊಟೆಲ್ ವ್ಯವಹಾರದಿಂದ ಬಂದ ಹಣದಿಂದ ಹಾಗೂ 1 ನೇ ದಾವಾ ಸ್ವತ್ತಿನಿಂದ ಬಂದ ಆದಾಯದಿಂದ 2 ನೇ ದಾವಾ ಸ್ವತ್ತನ್ನು ನಮ್ಮ ತಂದೆಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ 2 ನೇ ದಾವಾ ಸ್ವತ್ತನ್ನು ಖರೀದಿ ಮಾಡಲು ಆದಾಯದ ಮೂಲ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಆಟೋ ಓಡಿಸುತ್ತಿದ್ದ ಆದಾಯದಿಂದ ಮನೆ ಬಾಡಿಗೆ ಮತ್ತು ಜೀವನ ನಿರ್ವಹಿಸಲು ಸಾಕಾಗುತ್ತಿತ್ತು ಎಂದರೆ ಸರಿಯಲ್ಲ.

ನಮ್ಮ ತಂದೆ ಮೊದಲನೇ ಮಗ ಎಂದರೆ ಸರಿ . ನಮ್ಮ ತಂದೆ ಹಿರಿಯ ಮಗನಾಗಿದ್ದರಿಂದ 2 ನೇ ದಾವಾ ಸ್ವತ್ತನ್ನು ನಮ್ಮ ಅಜ್ಜಿ ಮತ್ತು ತಾತ ನಮ್ಮ ತಂದೆ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಚಿಕ್ಕಪ್ಪನ ಸಹಿಯನ್ನು ಗುರುತಿಸಬಲ್ಲೆ. ದಿಃ 28.04.1994 ರಂದು ನಮ್ಮ ತಂದೆ ಹಾಗೂ ಚಿಕ್ಕಪ್ಪ ಮತ್ತು ಅಜ್ಜಿಯ ನಡುವೆ ಅವರ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 24.01.2015 ರಂದು ನಮ್ಮ ತಂದೆಯ ಹಿಸ್ಸೆಗೆ ಬಂದ ಸ್ವತ್ತಿನ ಅರ್ಧ ಭಾಗದಲ್ಲಿ ಶಾಂತರಾಜು ಎನ್ನುವವರಿಗೆ ನಾನು, 2 ನೇ ವಾದಿ ಹಾಗೂ ನಮ್ಮ ತಂದೆ ತಾಯಿಗಳು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆಯ ಹೆಸರಿನಲ್ಲಿ ಖರೀದಿ ಮಾಡಿದ ಸ್ವತ್ತಿನ ವಿಸ್ತೀರ್ಣ 48 X 28 ಅಡಿ ಇರುತ್ತದೆ. ಅದರಲ್ಲಿ ಅರ್ಧ ಭಾಗವನ್ನು ಶಾಂತರಾಜು ಎನ್ನುವವರಿಗೆ

Danny 26/02

ಮಾರಾಟ ಮಾಡಿರುತ್ತೇವೆ. 2 ನೇ ದಾವಾ ಸ್ವತ್ತಿನಲ್ಲಿ ವಿಭಾಗದಂತೆ ದಕ್ಷಿಣ ಭಾಗಕ್ಕೆ 5 ನೇ ಪ್ರತಿವಾದಿಗೆ ಮತ್ತು ಉತ್ತರ ಭಾಗಕ್ಕೆ 1 ನೇ ಪ್ರತಿವಾದಿಗೆ ಬಂದಿತ್ತು ಎಂದರೆ ಸರಿಯಲ್ಲ. ನಿಪಿ 18 ರ ಚೆಕ್ಕುಬಂದಿಯ ದಕ್ಷಿಣಕ್ಕೆ ಜಗದೀಶ್ ರವರ ಮನೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ಜಗದೀಶ್ ಈ ದಾವೆಯ 5 ನೇ ಪ್ರತಿವಾದಿ ಎಂದರೆ ಸರಿ . ನಮ್ಮ ತಂದೆ ಹಾಗೂ 5 ನೇ ಪ್ರತಿವಾದಿಯ ನಡುವೆ ವಿಭಾಗ ಆಗಿದ್ದರಿಂದ ನಿಪಿ 18 ರಲ್ಲಿ 5 ನೇ ಪ್ರತಿವಾದಿಯ ಸ್ವತ್ತನ್ನು ದಕ್ಷಿಣದ ಕಡೆ ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅಸೆಸ್ಸಮೆಂಟ್ ರಿಜಿಸ್ಟರ್ ನ ದೃಡೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ನಮೂದು ಆಗಿರುವ ಪುಟ್ಟಮಾದಮ್ಮ, ಜಗದೀಶ್ ಮತ್ತು ನಟರಾಜ್ ಬಿನ್ ಬೋಸೇಗೌಡ ಎಂಬುದನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಸೆಸ್ಸಮೆಂಟ್ ರಿಜಿಸ್ಟರ್ ನ ದೃಡೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ನಮೂದು ಆಗಿರುವ ನಟರಾಜು ಬಿನ್ ಬೋಸೇಗೌಡ ಎಂಬುದನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ 2 ಎಂದು ಗುರುತಿಸಲಾಯಿತು.

ನಿಡಿ 2 ರಲ್ಲಿ ಮಾರಾಟ ಮಾಡಿದ ಮೇಲೆ ಶಾಂತರಾಜು ರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಆಸ್ತಿ ತೆರಿಗೆ ರಿಜಿಸ್ಟರ್ ನ ದೃಡೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ನಮೂದು ಆಗಿರುವ ಜಗದೀಶ್ ಬಿನ್ ಬೋಸೇಗೌಡ ಎಂಬುದನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ 3 ಎಂದು ಗುರುತಿಸಲಾಯಿತು. 5 ನೇ ಪ್ರತಿವಾದಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ . 5 ನೇ ಪ್ರತಿವಾದಿ ತೀರಿಕೊಂಡ ಮೇಲೆ ಅವರ ವಾರಸ್ಸುದಾರರ ಹೆಸರಿಗೆ ಖಾತೆ ವರ್ಗಾವಣೆ ಆಗಿರುವುದನ್ನು ನೋಡಿ ಒಪ್ಪಿದ್ದು ಅದನ್ನು ನಿಡಿ 4 ಮತ್ತು 5 ಎಂದು ಗುರುತಿಸಲಾಗಿದೆ. ದಿ 28.04.1994 ರ ವಿಭಾಗ ಪತ್ರದಂತೆ 2 ನೇ ದಾವಾ ಸ್ವತ್ತಿನ ಖಾತೆಯನ್ನು ನಮ್ಮ ತಂದೆ ಹಾಗೂ 5 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ದಾವಾ ಸ್ವತ್ತಿನ ಪೂರ್ವಕ್ಕೆ ನಂಜಯ್ಯನವರ ಮನೆ , ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಐಯ್ಯಂಗರ್ ರವರ ಜಾಗ , ದಕ್ಷಿಣಕ್ಕೆ ಗಲ್ಲಿ ಇರುತ್ತದೆ. ಸದರಿ ಚೆಕ್ಕುಬಂದಿಯು ನಮ್ಮ ತಂದೆ ಖರೀದಿ ಮಾಡಿದ ಒಟ್ಟು ಸ್ವತ್ತಿನ ಚೆಕ್ಕುಬಂದಿ ಆಗಿರುತ್ತದೆ. ನಾವು ಮಾರಾಟ ಮಾಡಿದ ಸ್ವತ್ತನ್ನು ಸೇರಿಸಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

2 ನೇ ದಾವಾ ಸ್ವತ್ತಿನಲ್ಲಿ ವಾಸವಿದ್ದ ಬಗ್ಗೆ ರೇಷನ್ ಕಾರ್ಡ ಹೊರತು ಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ. 2 ನೇ ದಾವಾ ಸ್ವತ್ತಿನಲ್ಲಿ 5 ನೇ ಪ್ರತಿವಾದಿಯ ವಾರಸ್ಸುದಾರರು ವಾಸ ಮಾಡುತ್ತಿದ್ದಾರೆ ಎಂದರೆ ಸರಿ . ದಿಃ 28.04.1994 ರ ವಿಭಾಗದಲ್ಲಿ ಬಂದ ಆಸ್ತಿಯನ್ನು ನಾವುಗಳು ಈಗಾಗಲೇ ಮಾರಾಟ ಮಾಡಿದ್ದು, 2 ನೇ ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1994 ರಿಂದ

Danny 26/02/26

ಇಲ್ಲಿಯವರೆಗೆ 2 ನೇ ದಾವಾ ಸ್ವತ್ತಿನ ಅನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಮತ್ತು ಅವರ ವಾರಸ್ಸುದಾರರು 2 ನೇ ದಾವಾ ಸ್ವತ್ತಿನಲ್ಲಿ ವಾಸ ಮಾಡುತ್ತಿದ್ದು ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸತ್ಯಾಂಶವನ್ನು ಮರೆ ಮಾಚಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಲಿವರ್ ಸಮಸ್ಯೆಯಿಂದ ಬಳಲುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದು ಅದರಿಂದ ತೀರಿಕೊಂಡಿರುತ್ತಾರೆ. ನಮ್ಮ ತಂದೆ ಚೆನ್ನಾಗಿ ನೋಡಿಕೊಂಡಿದ್ದರು ಎಂದರೆ ಸರಿ .

(2 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಓ.**

26/02/26

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**